ಮುಂದೇನೆಂದು ಯೋಚಿಸುತ್ತ... ಕುರ್ಚಿಯಲ್ಲಿ ಕೂರುವುದೋ ಬೇಡವೋ, ಕುಳಿತರೆಲ್ಲಿ ಸೋಂಕಂಟೀತೋ, ಹಾಗಾದರೆ ನಿಲ್ಲುವುದೇ ಕ್ಷೇಮವೋ, ನಿಂತೇನಾದರೆ ಎಲ್ಲಿ ನಿಲ್ಲುವುದು... ಎಂದೆಲ್ಲ ಎಣಿಸುತ್ತಿರುವ ನಡುವೆಯೇ, ಒಮ್ಮೆ ಕಿಸೆತಡಕಿಕೊಂಡು, ಸ್ಯಾನಿಟೈಸರ್ ತರದಿದ್ದಕ್ಕೆ ತತ್ಥಂದುಕೊಂಡು... ಸರಿ, ಒಂದು ಹೆಜ್ಜೆ ಕಾರಿನವರೆಗೂ ನಡೆದು ತಂದರಾಯಿತು ಅಂದುಕೊಂಡಿದ್ದಷ್ಟೆ – ಇವನು ಬೆನ್ನಿನಲ್ಲಿ ವಕ್ಕರಿಸಿ, ಭುಜತಟ್ಟಿ ಮಾತು ಹೊಂಚುವುದೇ?

ಬೆಚ್ಚಿಬಿಟ್ಟೆ. ಬೆಚ್ಚಿದ ನೇರಕ್ಕೇ ಹಿಂದೆ ತಿರುಗಿದೆ. ತಿರುಗುವ ಸುಮಾರಿನಲ್ಲಿಯೇ ಮುಸುಡಿಯ ಮಾಸ್ಕು ತಿದ್ದಿಕೊಂಡೆ.

'ಆರ್ಕಿಟೆಕ್ಟ್ ಶಕ್ತೀ ರೈಟ್?' ಮನುಷ್ಯ ಸಾವಿಗಿಂತ ಸನಿಹ ಸಾಧಿಸಿ ಪ್ರಶ್ನಿಸಿದ. ಸಾವೇ ಮೈದಡವಿತೋ ಹೇಗೆ? ಇಷ್ಟು ಸಾಲದೆಂಬಂತೆ, ಮಹಾಶಯನ ಮುಸುಡಿಮುಚ್ಚಿದ್ದ ಕಡುಗೇಸರಿ ಬಣ್ಣದ ಮಾಸ್ಕು ಎದ್ದೊದ್ದು ತೋರಿ – ನೇರ ಕಿವಿಯೊಳಗಿಳಿದು ಗುಗ್ಗೆ ಗೊಟಾಯಿಸಿದಂತಾಯಿತು.

ಚಂಗನೆ ಕೆಲದೂರ ಹಿಂಜರಿದು, 'ಯೆಸ್ಸ್...' ಅಂತಂದೆ. ಕಣ್ಣುಕಿರಿದಾಗಿಸಿ ಆಗಂತುಕನ ಮೋರೆ ದಿಟ್ಟಿಸುತ್ತಲೇ ಮತ್ತೂ ಒಂದೆರಡು ಹೆಜ್ಜೆ ಹಿಮ್ಮೆಟ್ಟಿನಿಂತೆ.

ನರೆತ ಮುಡಿಗಿಂತ ಹೆಚ್ಚಾಗಿ ನರೆಗಡ್ಡವಿದ್ದ ಮನುಷ್ಯ. ವಯಸ್ಸು ಅರವತ್ತು ದಾಟಿತ್ತೇನೋ. ಹಣೆಯಲ್ಲಿ ಬಲಹುಬ್ಬಿನ ಮೇಲೊಂದು ಕಾಸಗಲದ ಹಳೆಯ ಗಾಯದ ಗುರುತಿತ್ತು. ಕಣ್ಣುಗಳಲ್ಲಿ ಒನ್ನಮೂನೆ ಅಜೀಬಾದ ಚುರುಕು ಮತ್ತು ಗುಮಾನಿ. ಇನ್ನು, ಆ ಕೇಸರೀಮಾಸ್ಕಿನ ಕರಾಮತ್ತೋ – ಆಡುವುದೇ ಬೇಡ. ಮನುಷ್ಯ ಏಕ್‌ದಮ್ ಖತರುನಾಕನಿಸಿಬಿಟ್ಟ.

ನೋಡಿದೆ. ನೋಡಿಯೇ ನೋಡಿದೆ.

ಒಂದೇ ಸಮ ಕಣ್ಣೆಳಕಿಸಿ, ಪಾಪೆ ಸಂಕುಚಿಸಿ ನೋಡಿದರೂ – ಯಾರೆಂದು ತಿಳಿಯದೆ ಚಡಪಡಿಸಿದೆ.

'ಗುರುತು ಸಿಗಲಿಲ್ಲ ಅನಿಸುತ್ತೆ.' ಅಂತಂದ ಅವನು, ಒಂದು ಹೆಜ್ಜೆ ಮುಂದೆಬಂದು, ಮುಖದ ಕೆಳಾರ್ಧದಿಂದ ಆ ಕೇಸರೀಮಾಸ್ಕನ್ನು ತುಸುವೇ ಕೆಳಗಿಳಿಸಿ, ತನ್ನ ನರೆಗಡ್ಡದ ಇಳಿಜೊಂಪೆಯ ಮುಸುಡಿಯನ್ನು ಅಷ್ಟಿಷ್ಟು ನಿಚ್ಚಟಿಸಿ ತೋರಿದಾಗ – ವಿಚಿತ್ರವೆನ್ನಿಸಿತೇ ಹೊರತು, ಸುತರಾಂ ಯಾರೆಂದು ಗೊತ್ತಾಗಲಿಲ್ಲ. ಇದನ್ನರಿತ ಈ 'ಅಪರಿಚಿತ'ನು, 'ನಾನು ಕರ್ನಲ್ ಚಾರೀ... ರಿಮೆಂಬರ್?' ಎಂದು ತನ್ನ ಹೆಸರುಸಹಿತ (ಮುಖ)ಪರಿಚಯ ಬಿಚ್ಚಿಟ್ಟರೂ – ಹಾಳಾದ್ದು, ನನ್ನೊಳಗೆ (ನಿಜ)ಪರಿಚಯ ಹುಟ್ಟಿಬರಲಿಲ್ಲ. ಇಷ್ಟಿದ್ದೂ, ತೀರಾ ಗೊತ್ತಿಲ್ಲವೆಂದು ಮುಖದ ಮೇಲೇ ಹೇಳುವುದು ತರವಲ್ಲವೆಂಬ ಸೌಜನ್ಯಕ್ಕೆ, 'ಯೆಸ್ಸ್ ಯೆಸ್ಸ್ ಕರ್ನಲ್ ಚಾರಿ, ಹವ್ವಾರ್ಯು?' ಅಂತಂದು, ಲಾಘವಕ್ಕೆಂದು ಬಲಗೈ ಮುಂಚಾಚಿದೆನಾದರೂ, ಅದು ಬರೇ ನಟನೆಯೆಂದು ನನಗೆ ಗೊತ್ತಿತ್ತು. ಬಹುಶಃ, ಅವನಿಗೂ ಗೊತ್ತಾಯಿತೇನೋ... ಮನಸೊಳಗೇ 'ಏನು ಮಹಾ!' ಅಂತನಿಸಿತಾದರೂ ಹೊರಗೆ ತೋರ್ಪಡಿಸದೆ, ಕೂಡಲೇ ಜಾಗರೂಕನಾಗಿ ಕೈಹಿಂದೆಳೆದುಕೊಂಡು, 'ಈ ಹಾಳುಕ್ರಿಮಿ ಮನುಕುಲದ ಪ್ರತಿಷ್ಠೆಯನ್ನೇ ಹಾಳುಗೆಡಹಿಟ್ಟಿದೆ – ನೋಡಿ. ಕೈಕುಲುಕುವ ಸೌಜನ್ಯವನ್ನೂ ಇಲ್ಲದಾಗಿಸಿದೆ... ಬೇಸಿಕ್ ಡೆಕೊರೊಮೇ ಇಲ್ಲವಾಯಿತೇ?' ಅನ್ನುತ್ತ ಪೆಚ್ಚುಪೆಚ್ಚಾಗಿ ನಕ್ಕು, ಮತ್ತೊಮ್ಮೆ ಹಿಂಜರಿದು ನನ್ನ ಮಾಸ್ಕಿನ ಜತನ ತಿದ್ದಿಕೊಂಡೆ.

ಆದರೆ, ಈ ಆಗಂತುಕನಿಗೆ ವೈರಸ್–ಕುರಿತಾದ ನನ್ನ ಮಾತಿನ ಬಗ್ಗೆ ಪರಿವೆಯೇ ಇದ್ದಂತಿರಲಿಲ್ಲ. 'ನೀವು ನನ್ನ ಗುರುತು ಹಿಡೀಲಿಲ್ಲ, ಶಕ್ತೀ...' ಅನ್ನುತ್ತ, ಇದ್ದಲ್ಲೇ ಜಡಿದುಕೊಂಡಿದ್ದು ಶಂಕೆ ಮುಂದುವರೆಸಿದ.

ನಾನೂ ಪೆಚ್ಚುಪೆಚ್ಚಾಗಿಯೇ ಮಿಕ್ಕೆನಾದರೂ, ಮಹಾನುಭಾವನು, ತನ್ನ ಕೇಸರಿಬಣ್ಣದ ಮಾಸ್ಕಿನೊಟ್ಟಿಗೆ ಪೂರಾ ಅಂದರೆ ಪೂರಾ ತಾಳೆಯಾಗುತ್ತಿದ್ದ 'ಅದೇ' ರಂಗಿನ ಪ್ಯಾಂಟೂ ತೊಟ್ಟಿದ್ದನ್ನು